ಪ್ರತ್ಯೇಕವಾಗಿ ಕೇಳಿದರೆ ಉತ್ತರಿಸುತ್ತೇನೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಪ್ರಶ್ನೆ ಸಂಖ್ಯೆ: ೨೬೬(೨೪೯೨)
(ಶ್ರೀ ವಿ.ಸೋಮಣ್ಣ ಗೈರು ಹಾಜರಾಗಿದ್ದರು)

ಪ್ರಶ್ನೆ ಸಂಖ್ಯೆ: ೨೬೭(೩೩೦೨)
(ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ ಗೈರು ಹಾಜರಾಗಿದ್ದರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೪೬೧

ಸದಸ್ಯರ ಹೆಸರು : ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜನಗರ)

ಉತ್ತರಿಸುವ ಸಚಿವರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ)

	ಪ್ರಶ್ನೆ	ಉತ್ತರ
ಅ.	ಚಾಮರಾಜನಗರ – ಮೆಟ್ಟುಪಾಳ್ಯಂ ರೈಲು ಮಾರ್ಗಕ್ಕೆ ಎಷ್ಟು ಎಕರೆ ಸಂಬಂಧಿಸಿದಂತೆ ಅರಣ್ಯ ಭೂಮಿ ಬೇಕಾಗುತ್ತದೆ.	ಚಾಮರಾಜನಗರ – ಮೆಟ್ಟುಪಾಳ್ಯಂ ರೈಲು ಮಾರ್ಗಕ್ಕೆ ಅರಣ್ಯ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಆ.	ಇದರಿಂದ ನಾಶವಾಗುವ ಮರಗಳ ಸಂಖ್ಯೆ ಎಷ್ಟು:	ಉದ್ಭವಿಸುವುದಿಲ್ಲ.
ಇ.	ಈ ಯೋಜನೆಗಳಿಂದ ಅರಣ್ಯದಲ್ಲಿರುವ ೨೫೦೦ ಆನೆಗಳು ರೈಲು ಹಳಿಗಳನ್ನು ದಾಟಲು ಸರ್ಕಾರವು ಯಾವ ರೀತಿಯ ಕ್ರಮ ಕೈಗೊಳ್ಳಲು ಯೋಚಿಸಿದೆ:	ಉದ್ಭವಿಸುವುದಿಲ್ಲ
ಈ.	ವನ್ಯ ಮೃಗಗಳು ರೈಲಿನ ಅಪಘಾತಕ್ಕೊಳಗಾಗದಂತೆ ಯಾವ ರೀತಿಯ ರಕ್ಷಣಾ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು:	ಉದ್ಭವಿಸುವುದಿಲ್ಲ.
ಉ.	ಈ ರೈಲು ಯೋಜನೆಯಿಂದ	

	ನಾಶಗೊಳ್ಳುವ ಅರಣ್ಯ ಸಂಪತ್ತನ್ನು ಸರಿದೂಗಿಸಲು ಸರ್ಕಾರ ಯಾವ ಯಾವ ಯೋಜನೆಯನ್ನು ರೂಪಿಸಿದೆ:	ಉದ್ಭವಿಸುವುದಿಲ್ಲ.
ಊ.	ಅದರ ಅಂದಾಜು ವೆಚ್ಚವೆಷ್ಟು :	ಉದ್ಭವಿಸುವುದಿಲ್ಲ.
ಋ.	ಯೋಜನೆಯನ್ನು ರೂಪಿಸದಿದ್ದಲ್ಲಿ, ಯಾವಾಗ ರೂಪಿಸಲಾಗುವುದು.	ಈ ಸಂಬಂಧ ರೈಲ್ವೆ ಅಧಿಕಾರಿಗಳಿಂದ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಏನೂ ಇಲ್ಲ. ನಾನು ಕೇಳಿರುವ ಪ್ರಶ್ನೆಗಳಿಗೆ 'ಉದ್ಭವಿಸುವುದಿಲ್ಲ' ಎಂಬ ಉತ್ತರಗಳನ್ನು ನೀಡಿದ್ದಾರೆ. ಏನಿದು? 'ಚಾಮರಾಜನಗರ-ಮೆಟ್ಟುಪಾಳ್ಯಂ ರೈಲು ಮಾರ್ಗಕ್ಕೆ ಎಷ್ಟು ಎಕರೆ ಅರಣ್ಯ ಭೂಮಿ ಬೇಕಾಗುತ್ತದೆ?' ಈ ಕುರಿತು ಏನಾದರೂ ಪ್ರಸ್ತಾವನೆ ಬಂದಿದೆಯೇ? ಬಂದಿದ್ದಲ್ಲಿ, ತಿಳಿಸುವುದು ಎಂದು ಕೇಳಿದರೆ, ಎಲ್ಲಾ ಪ್ರಶ್ನೆಗಳಿಗೂ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದೀರಿ. ಇದರ ಅರ್ಥವೇನು? ಚಾಮರಾಜನಗರ-ಮೆಟ್ಟುಪಾಳ್ಯಂ ರೈಲು ಮಾರ್ಗ ಆಗುವುದು ಬೇಡವೆಂದು ಹೇಳುತ್ತಿಲ್ಲ. ಆದರೆ, ನಾನು ಕೇಳಿರುವ ಯಾವುದೇ ಪ್ರಶ್ನೆಗೂ ಇಲ್ಲವೆಂದು ಉತ್ತರಿಸಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವುದೇನೆಂದರೆ, ರೈಲು ಮಾರ್ಗಕ್ಕೆ ಅರಣ್ಯ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಆ ಭಾಗದಲ್ಲಿ ಬರುವ ಅರಣ್ಯವನ್ನು ರಕ್ಷಿಸುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಲಾಗುತ್ತಿದೆಯೇ? ಇಲ್ಲವೇ? ಎಂದು ಕೇಳಿದ್ದಾರೆ. ರೈಲು ಮಾರ್ಗಕ್ಕೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ತಾವು ಅದನ್ನು ಕವನ ರೂಪದಲ್ಲಿ ಕೇಳಬೇಕಿತ್ತು. ಗದ್ಯ ರೂಪದಲ್ಲಿ ಕೇಳಿರುವುದರಿಂದ ಸಮಸ್ಯೆಯುಂಟಾಗಿದೆ!

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ರೈಲು ಮಾರ್ಗಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಜಾಗ ಕೇಳಿಲ್ಲ. ಅದಕ್ಕೋಸ್ಕರ, ಉತ್ತರದಲ್ಲಿ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದೇವೆ. ಈ ಸಂಬಂಧ ಅರಣ್ಯ ಜಾಗವನ್ನು ವಶಪಡಿಸಿಕೊಳ್ಳಲಾಗಿದೆಯೇ? ಎಂದು ಕೇಳಿದ್ದರೆ ಹೇಳುತ್ತಿದ್ದೆ. ಆದರೆ, ಅರಣ್ಯದ ಯಾವುದೇ ಭಾಗವನ್ನು ವಶಪಡಿಸಿಕೊಂಡಿಲ್ಲ.

ಅದಕ್ಕೋಸ್ಕರವೇ 'ಉದ್ಭವಿಸುವುದಿಲ್ಲ'ವೆಂದು ಉತ್ತರಿಸಿದ್ದೇವೆ ಮತ್ತು ಯಾರೂ ಕೂಡ ಅಪ್ಲಿಕೇಶನ್ ಹಾಕಿಲ್ಲ, ಅಪ್ಲಿಕೇಶನ್ ಹಾಕಿದ್ದರೆ, 'ಹಾಕಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಹೇಳಲು ಸಾಧ್ಯವಾಗುತ್ತದೆ. ಆದರೆ, ಯಾರೂ ಅರ್ಜಿ ಸಲ್ಲಿಸಿಲ್ಲ, ಅಲ್ಲಿ ಸರ್ವೆ ಕಾರ್ಯ ಕೂಡ ನಡೆಯುತ್ತಿಲ್ಲ, ಇಷ್ಟು ಹೇಳಿದ ನಂತರ ಇನ್ಯಾವ ಉತ್ತರ ಹೇಳಬೇಕು? ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಅದಕ್ಕೋಸ್ಕರವೇ ಎದ್ದು ಹೊರಗಡೆ ಹೋಗಿದ್ದು ನಾನು ಕೇಳಿರುವ ಯಾವುದೇ ಪ್ರಶ್ನೆಗೂ ಸರಿಯಾದ ಉತ್ತರವಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಉತ್ತರ ಕೊಟ್ಟಿದ್ದೇವೆ. ಹೊಸದಾಗಿ ಸೃಷ್ಟಿ ಮಾಡಿ ಹೇಳುವುದಕ್ಕಾಗುತ್ತದೆಯೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ನಾನು ಪ್ರಶ್ನೆ ಕೇಳಿರುವುದಕ್ಕೆ ಸ್ಪಷ್ಟವಾದ ಉತ್ತರವಿಲ್ಲ 'ಉದ್ಭವಿಸುವುದಿಲ್ಲ' ಎಂದರೆ ಅದು ಸ್ಪಷ್ಟ ಉತ್ತರವೇ? ಮೊದಲನೆಯ ಪ್ರಶ್ನೆ 'ಚಾಮರಾಜನಗರ-ಮೆಟ್ಟುಪಾಳ್ಯಂ ರೈಲು ಮಾರ್ಗಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ' ಎಂದು ಹೇಳಿದ್ದಾರೆ. ಪ್ರಸ್ತಾವನೆ ಇಲ್ಲದಿದ್ದರೆ, ನಾನು ಪ್ರಶ್ನೆ ಕೇಳುವುದಕ್ಕಾಗುತ್ತದೆಯೇ? ಹಾಗಾದರೆ, ನೀವು ನೋಡಲಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾವು ಚಾಮರಾಜನಗರ-ಮೆಟ್ಟುಪಾಳ್ಯಂ ರೈಲುಮಾರ್ಗಕ್ಕೆ ಎಷ್ಟು ಎಕರೆ ಅರಣ್ಯ ಭೂಮಿ ಬೇಕಾಗುತ್ತದೆ ಎಂದು ಪ್ರಶ್ನೆಯನ್ನು ಕೇಳಿದ್ದೀರಿ. ಆದರೆ ಅವರು ನಮಗೆ ಅದರ ಬಗ್ಗೆ ಅರ್ಜಿಯನ್ನೇ ಹಾಕಿಲ್ಲ, ಹೀಗಿರುವಾಗ ನಾವು ಎಷ್ಟು ಅರಣ್ಯ ಬೇಕಾಗುತ್ತದೆ ಎಂದು ಹೇಳೋಣ. ಅಪ್ಲಿಕೇಶನ್ನೂ ಇಲ್ಲ ಏನೂ ಇಲ್ಲ ಎಷ್ಟು ಅರಣ್ಯ ಬೇಕು ಎಂದರೆ ಹೇಗೆ ಕೊಡುವುದು. ಆದ್ದರಿಂದ ನಾವು ಕೊಟ್ಟಿರುವ ಉತ್ತರ ಸರಿಯಾಗಿದೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ರೈಲ್ವೆ ಇಲಾಖೆಯವರು ಚಾಮರಾಜನಗರ-ಮೆಟ್ಟುಪಾಳ್ಯಂ ರೈಲು ಮಾರ್ಗ ಮಾಡಲು ಅರಣ್ಯ ಪ್ರದೇಶ ಹೋಗುತ್ತದೋ ಇಲ್ಲವೋ ಎಂಬ ಬಗ್ಗೆ ಸರ್ವೆ ಮಾಡಿ ಆ ವರದಿಯ ಆಧಾರದ ಮೇಲೆ ಅರಣ್ಯ ಇಲಾಖೆಯವರಿಗೆ ನಮಗೆ ಇಷ್ಟು ಜಮೀನು ಬೇಕಾಗುತ್ತದೆ ಎಂದರೆ ನಾವು ಕೊಡಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದಲ್ಲಿ ಏನೇನೂ ಇಲ್ಲ, ಉತ್ತರವನ್ನು ಕ್ಲಿಯರ್ ಆಗಿ ಕೊಟ್ಟಿದ್ದೇವೆ.

ಅಧ್ಯಕ್ಷರು : ರೈಲ್ವೆ ಇಲಾಖೆಯವರು ಅರ್ಜಿಯನ್ನೇ ಹಾಕಿಲ್ಲ ಎಂದಾಗ ಏನು ಮಾಡುತ್ತೀರಿ?

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಶಂಕರಲಿಂಗೇಗೌಡರಿಗೆ ಈ ರೈಲು ಮಾರ್ಗವಾಗಬಾರದು ಎಂಬ ಉದ್ದೇಶ ಇಲ್ಲ. ಒಂದು ವೇಳೆ ಅಥವಾ ರೈಲ್ವೆ ಆಗುವುದಾದರೆ ಅರಣ್ಯ ಪ್ರದೇಶವೇನಾದರೂ ನಷ್ಟಕ್ಕೆ ಒಳಗಾಗುತ್ತದೆಯೆ, ಎಷ್ಟು ಎಕರೆ ಆಗಬಹುದು ಎಂದು ಕೇಳಿದರು. ಇವರು ಉತ್ತರವನ್ನು ಸರಿಯಾಗಿ ಕೊಟ್ಟಿದ್ದಾರೆ. ಮೂರನೇ ಪ್ರಶ್ನೆ ಏನೆಂದರೆ, ಇದರ ಬಗ್ಗೆ ಕೇಂದ್ರಕ್ಕೆ ಹೋಗಿ ಏನಾದರೂ ಕೇಳಿ ಒತ್ತಡ ತರುತ್ತೀರಾ? ನನ್ನ ಮೂಲಭೂತವಾದ ಪ್ರಶ್ನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಇವರು ರಾಜ್ಯದ ರೈಲ್ವೆ ಬೇಡಿಕೆಗಳ ಬಗ್ಗೆ ಅನೇಕ ಸಲ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿದ್ದೇವೆಂದು ಹೇಳಿದ್ದಾರೆ. ಚಾಮರಾಜನಗರ-ಮೆಟ್ಟುಪಾಳ್ಯಂ ರೈಲಿಗಾಗಿ ಬಣ್ಣಾರಿಅಮ್ಮದಲ್ಲಿ ಸಮೀಕ್ಷೆ ಕಾರ್ಯ ನಡೆಯಿತು. ಆದರೆ, ಅದಕ್ಕೆ ರೈಲ್ವೆಯಲ್ಲಿ ಹಣವನ್ನು ಒದಗಿಸಿಲ್ಲ. ಆದ್ದರಿಂದ, ಚಾಮರಾಜನಗರ-ಮೆಟ್ಟುಪಾಳ್ಯಂ ಸೇರಿದಂತೆ ಕರ್ನಾಟಕ ರಾಜ್ಯದ ಎಲ್ಲಾ ರೈಲ್ವೆ ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪುನಃ ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತೀರ ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಎನ್.ಧರ್ಮಸಿಂಗ್: ಇದು ಉಪಪ್ರಶ್ನೆಯಾಗುವುದಿಲ್ಲ. ದೊಡ್ಡ ಪ್ರಶ್ನೆಯಾಗುತ್ತದೆ. ಆದ್ದರಿಂದ ಅವರು ಬೇರೆ ಕಳಿಸಲಿ.

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಮುಖ್ಯವಾದ ಪ್ರಶ್ನೆ. ಅದಕ್ಕಾಗಿ ತಮಗೆ ಕೇಳಿದೆ. ಚಾಮರಾಜನಗರ-ಮೆಟ್ಟುಪಾಳ್ಯಂ ಸೇರಿದಂತೆ ರಾಜ್ಯದಲ್ಲಿರುವ ರೈಲ್ವೆ ಬೇಡಿಕೆಗಳ ಬಗ್ಗೆ ತಾವು ಕೇಂದ್ರದ ಮೇಲೆ ಒತ್ತಡ ಹೇರುತ್ತೀರ?

ಶ್ರೀ ಎನ್.ಧರ್ಮಸಿಂಗ್: ಅರಣ್ಯ ಮಂತ್ರಿಗಳಿಗೆ ಮಾನ್ಯ ಶಂಕರಲಿಂಗೇಗೌಡರು ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಉತ್ತರವನ್ನೂ ಕೊಟ್ಟಿದ್ದಾರೆ. ರೈಲ್ವೆಗೆ ಸಂಬಂಧಪಟ್ಟ ಮಹತ್ವವಾದ ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಇದಕ್ಕೆ ಪ್ರತ್ಯೇಕವಾದ ಉತ್ತರವನ್ನು ಕೊಡುತ್ತೇವೆ. ಈಗಾಗಲೇ ದೆಹಲಿಗೆ ಇದರ ಬಗ್ಗೆ ನಿಯೋಗವನ್ನು ತೆಗೆದುಕೊಂಡು ಹೋಗುವ ಬಗ್ಗೆ ಹೇಳಿದ್ದೇವೆ, ಅದನ್ನು ಮಾಡುತ್ತೇವೆ.